ಅಸಲು ದಾವಾ ನಂ.965/2017
ಡಿ.ಡಬ್ಲೂಃ 01

ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **17-01-2024**

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ.RLP ರವರಿಂದಃ

1. ಉಳಿದ ಪ್ರತಿವಾದಿಯರು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದಾರೆ. ಸದರಿ ಅಧಿಕಾರ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರ ಪಡಿಸಿದ್ದೇನೆ. ಈ ದಾವೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿದೆ. ನನ್ನ ಸಾಕ್ಷ್ಯಪ್ರಮಾಣ ಪತ್ರದ ಪ್ಯಾರಾ ನಂ.3 ರಲ್ಲಿ ಅಸಲರ್ಜಿ ಪ್ಯಾರಾ ನಂ.1 ರಲ್ಲಿ ನೀಡಿದ ಆಸ್ತಿ ವಿವರಣೆ ಸರಿ ಇರುವುದಿಲ್ಲ ಅಂತ ಬರೆದಿದ್ದು ಅದು ಯಾವ ರೀತಿ ಅಂತ ನನಗೆ ಹೇಳಲು ಬರುವುದಿಲ್ಲ. ವಾದಿಯು ತನ್ನ ಅಸಲರ್ಜಿ ಹಾತ ನಕಾಶೆಯಲ್ಲಿ ರಸ್ತೆಯನ್ನು ಯಾವ ಅಕ್ಷರದಲ್ಲಿ ಬರೆದಿರುತ್ತಾರೆ ಎನ್ನುವುದು ನನಗೆ ಹೇಳಲು ಬರುವುದಿಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರ ಪ್ಯಾರಾ ನಂ.4 ರಲ್ಲಿ ಅಸಲರ್ಜಿ ಪ್ಯಾರಾ ನಂ.2 ರಲ್ಲಿ ವಿವರಿಸಿದ ಸಂಗತಿಗಳು ಖೊಟ್ಟಿ ಇದೆ ಅಂತ ಬರೆದಿದ್ದು ಇದ್ದು ಅದು ಯಾವ ರೀತಿ ಎಂದರೆ ಸಾಕ್ಷಿಯು ಅವರು ನಮ್ಮ ಮೇಲೆ ಹಾಕಿದ ಕೇಸ ತಪ್ಪು ಇದೆ ಅಂತ ಹೇಳುತ್ತಾರೆ.

2. ಸರ್ವೆ ನಂ.132 ಇದು ನಮ್ಮ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ವಾದಿಯರಿಗೆ ಅವರ ಜಮೀನು ಅವರ ಹಿರಿಯರಿಂದ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರಿಗೆ ಜಮೀನು ಯಾವ ರೀತಿ ಬಂತು ಅಂತ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಸರ್ವೆ ನಂ.132 ಇದು ನಂದಗಾಂವ ಕುಟುಂಬಕ್ಕೆ ಸಂಬಂದಪಟ್ಟ ಆಸ್ತಿ ಎಂದರೆ ಸರಿ. ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಅಥಣಿ-ಕಿರಣಗಿ ರಸ್ತೆ ಇದೆ ಎಂದರೆ ಸರಿ. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ವಾದಿಯರ ಜಮೀನು ಇದೆ. ವಾದಿಯರು ತಮ್ಮ ಜಮೀನನ್ನು 3 ಪಟ್ಟಿಯನ್ನಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ನಾವು ನಮ್ಮ ಜಮೀನನ್ನು 3 ಪಟ್ಟಿಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಜಮೀನು ಪಟ್ಟಿಯಾಗಿರುವುದಿಲ್ಲ, ಅದು ಅಖಂಡ ಇದೆ. ನನ್ನ ಪ್ರತಿವಾದ ಪತ್ರದ ಜೊತೆ ಹಾಜರ ಪಡಿಸಿದ ಕೈ ನಕಾಶೆಯಲ್ಲಿ ನಮ್ಮ ಜಮೀನನ್ನು ನಾನು ಅಖಂಡವಾಗಿ ತೋರಿಸಿರುತ್ತೇನೆ. ನಾನು ಹಾಜರ ಪಡಿಸಿದ ಕೈ ನಕಾಶೆಯಲ್ಲಿ ನಮ್ಮ ಜಮೀನು ಪಟ್ಟಿಗಳನ್ನಾಗಿ ತೋರಿಸಿದ್ದು, ಅದು ಅಖಂಡವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಪರಗೊಂಡ ಕಲ್ಲಪ್ಪ ನಂದಗಾಂವ ರವರ ಜಮೀನು ಇದೆ. ನನ್ನ ಜಮೀನಿನ ಉತ್ತರ ದಿಕ್ಕಿಗೆ ಸಂಗಪ್ಪ ಅಣ್ಣಪ್ಪ ನಂದಗಾಂವ ರವರ ಜಮೀನು ಇದೆ. ನಾನು ಮೇಲೆ ಹೇಳಿದ ಚಕಬಂದಿಯನ್ನು ನನ್ನ ಪ್ರತಿವಾದ

ಪತ್ರದ ಜೊತೆ ಹಾಜರ ಪಡಿಸಿದ ಕೈ ನಕಾಶೆಯಲ್ಲಿ ತೋರಿಸಿರುತ್ತೇನೆ. ವಾದಿಯರ ಜಮೀನಿನ ಪಶ್ಚಿಮ ದಿಕ್ಕಿಗೆ ನಮ್ಮದೆ ಜಮೀನು ಬರುತ್ತದೆ ಎಂದರೆ ಸರಿ. ವಾದಿಯರ ಜಮೀನಿನ ಪೂರ್ವ ದಿಕ್ಕಿಗೆ ಯಾರ ಜಮೀನು ಬರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಯರ ಜಮೀನಿನ ದಕ್ಷಿಣ ದಿಕ್ಕಿಗೆ ಲವ ಕಾಂಬಳೆ ರವರ ಜಮೀನು ಇದೆ. ಉತ್ತರಕ್ಕೆ ಬಸಪ್ಪ ಕೋಳಿ ರವರ ಜಮೀನು ಇದೆ. ಸದರಿ ಮೇಲೆ ಹೇಳಿದ ಚಕಬಂದಿಯನ್ನು ನಾನು ಹಾಜರ ಪಡಿಸಿದ ಕೈ ನಕಾಶೆಯಲ್ಲಿ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. ಸರ್ವೆ ನಂ.132/1 ಎ ನನ್ನ ಪ್ರಕಾರ 9 ಎಕರೆ 27 ಗುಂಟೆ ಅಖಂಡ ಇದೆ ಎಂದರೆ ಸರಿ. ಸದರಿ ಜಮೀನು ತಲಾ 3 ಎಕರೆ 9 ಗುಂಟೆಯಂತೆ 3 ಪಟ್ಟಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಒಟ್ಟು 9 ಎಕರೆ 27 ಗುಂಟೆ ಜಮೀನಲ್ಲಿ ಕೆನಾಲ ಹೋಗಿರುವುದಿಲ್ಲ. ವಾದಿಯರ 3 ಪಟ್ಟಿಗಳಲ್ಲಿ ಕೆನಾಲ ಹೋಗಿದೆ. ಸದರಿ ವಾದಿಯರ ಜಮೀನಲ್ಲಿ ಕೆನಾಲ ಹೋಗಿದೆ ಅಂತ ತೋರಿಸಲು ನಾನು ಯಾವದೇ ದಾಖಲೆಯನ್ನು ತೋರಿಸಿರುವುದಿಲ್ಲ. ಕೆನಾಲ ಹೋಗಿರುವ ಬಗ್ಗೆ ನಾನು ಕೈ ನಕಾಶೆಯಲ್ಲಿ ಬರೆಸಿರುತ್ತೇನೆ. ವಾದಿಯರ ಜಮೀನಿನ ಎರಡು ಬಾಜು ಕೆನಾಲ ಹೋಗಿದೆ. ಎರಡು ಬಾಜು ಎಂದರೆ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಹೋಗಿರುತ್ತದೆ. ಈ ರೀತಿ ಕೆನಾಲ ಹೋಗಿರುವ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ನಾನು ಹಾಜರ ಪಡಿಸಿರುವ ಕೈ ನಕಾಶೆಯಲ್ಲಿ ಬರೆಸಿರುತ್ತೇನೆ. ಎರಡು ಬದಿಯಲ್ಲಿ ಕೆನಾಲ ಹೋಗಿದೆ ಅಂತ ನನ್ನ ಕೈ ನಕಾಶೆಯಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಬರೆಸಿರತ್ತೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಜಮೀನು ಸರ್ವೆ ನಂ.133/11 ರಲ್ಲಿ ಕೆನಾಲ ಹೋಗಿದೆ. ವಾದಿಯರ ಜಮೀನಲ್ಲಿ ಕೆನಾಲ ಹೋಗಿದೆ ಅಂತ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಲು ನಿಮಗೆ ತೊಂದರೆ ಇದೇಯಾ ಎಂದರೆ ಸಾಕ್ಷಿಯು ದಾಖಲೆ ಹಾಜರ ಮಾಡಿದ್ದೇನೆ ಎನ್ನುತ್ತಾರೆ. ಕೆನಾಲ ಕುರಿತು ದಾಖಲೆಗಳನ್ನು ಯಾರಿಂದ ಪಡೆದು ನಾನು ಹಾಜರ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ವಾದಿಯರು ಹಾಜರ ಪಡಿಸಿದ ಕೈ ನಕಾಶೆಯಂತೆ ಪಟ್ಟಿಗಳು ಇರುತ್ತವೆ ಅಂತ ಸದರಿ ಕೈ ನಕಾಶೆಯನ್ನು ಸಾಕ್ಷಿಗೆ ತೋರಿಸಿ ಕೆಳಲಾಗಿ ಸಾಕ್ಷಿಯು ಅದನ್ನು ನೋಡಿ ಹೌದು ಎನ್ನುತ್ತಾರೆ. ಅದೇ ರೀತಿ ಸದರಿ ಕೈ ನಕಾಶೆಯಂತೆ ಅಥಣಿ-ಕಿರಣಗಿ ಮುಖ್ಯ ರಸ್ತೆ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಎನ್ನುತ್ತಾರೆ. ಸದರಿ ಕೈ ನಕಾಶೆಯಲ್ಲಿರುವ ರಸ್ತೆಯ ಮೂಲಕ ವಾದಿಯರು ಮತ್ತು ನಾವು ನಮ್ಮ ಜಮೀನುಗಳಿಗೆ ಹೋಗಿ ಬಂದು ಮಾಡುತ್ತೇವೆ ಎಂದರೆ ಸರಿಯಲ್ಲ.

3. ಅಸಲು ದಾವಾ ನಂ.235/2017 ನ್ನು ನಾವು ಶಂಕರ ಗೂಳಪ್ಪ ನಂದಗಾಂವ, ರಾಮಪ್ಪ ಗೂಳಪ್ಪ ನಂದಗಾಂವ, ಭೀಮಪ್ಪ ಗೂಳಪ್ಪ ನಂದಗಾಂವ, ಮಲ್ಲಪ್ಪ, ಸಂಗಪ್ಪ ಅಡಿವೆಪ್ಪ

ಅಸಲು ದಾವಾ ನಂ.965/2017
ಡಿ.ಡಬ್ಲೂಃ 01

ನಂದಗಾಂವ, ಸಂಗಪ್ಪ ಅಣ್ಣಪ್ಪ ನಂದಗಾಂವ  ರವರ ಮೇಲೆ ದಾಖಲಿಸಿದ್ದೇವೆ. ಆ ದಾವೆಯಲ್ಲಿ ಏನು ಆದೇಶ ಆಯಿತು ಎಂದು ನನಗೆ ಗೊತ್ತಿಲ್ಲ. ಅಸಲು ದಾವಾ ನಂ.586/2018 ದಾವೆಯನ್ನು ಯಾರು, ಯಾರ ಮೇಲೆ ದಾಖಲಿಸಿದ್ದಾರೆ ಎಂದು ನನಗೆ ನೆನಪಿಲ್ಲ. ಆ ದಾವೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತು, ಆದರೆ ಏನು ಬರೆದಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಅಸಲು ದಾವಾ ನಂ.235/2017 ದಾವೆಯಲ್ಲಿ ಏನು ಬರೆದಿರುತ್ತಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು 6 ಗುಂಟೆ ಸಲುವಾಗಿ ನಮಗೆ ಅವರಿಗೆ ಜಗಳವಾಗಿದ್ದು ಇದೆ ಎಂದು ಬರೆದಿರುತ್ತದೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ನಮಗೆ, ಅವರಿಗೆ 6 ಗುಂಟೆ ಜಮೀನು ಸಲುವಾಗಿ ಗಲಾಟೆಯಾಗಿದೆ ಎಂಬ ಬಗ್ಗೆ ಬಿಟ್ಟು ಬೇರೆ ಏನು ಇರುವುದಿಲ್ಲ. ಅಸಲು ದಾವಾ ನಂ.235/2017 ನೇ ದಾವೆಯನ್ನು ಹಿಂದಕ್ಕೆ ಪಡೆದುಕೊಳ್ಳುವ ಸಲುವಾಗಿ ವಾದಿಯರು ಈ ದಾವೆಯನ್ನು ದಾಖಲಿಸಿದ್ದಾರೆ ಅಂತ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ಆ ರೀತಿ ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವುದಿಲ್ಲ, ಆ ರೀತಿ ಬರೆಸಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಬರೆಸಿಲ್ಲವಾದರೂ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಈ ವಿಚಾರವನ್ನು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ತಿಳಿಯುತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.132 ಕ್ಕೆ ಕಿರಣಗಿ-ಅಥಣಿ ಒಂದೇ ರಸ್ತೆ ಇದೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಲಯ,
ಅಥಣಿ.